# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಯೋಜನೆಗಳಿಗೆ 2020-21ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 164 ಎಂಡಿಎಸ್ 2020, ದಿನಾಂಕ:19.05.2020.
2) ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಆಇ 94 ವೆಚ್ಚ-3/2020, ದಿನಾಂಕ:30-05-2020.
3) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 164 ಎಂಡಿಎಸ್ 2020, ದಿನಾಂಕ:11.06.2020.
4) ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: ಅಸಂನಿ /ಆ.ವ್ಯ / ಬಿಡುಗಡೆ/ಸಿಆರ್/ 03(1) /2020-21, ದಿನಾಂಕ:12.06.2020
5) ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಇವರ ಪತ್ರ ಸಂಖ್ಯೆ: KSBA/Ac/Govt-Bill/01/2020-21 ದಿನಾಂಕ :11.06.2020.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರ ಪತ್ರ ಸಂಖ್ಯೆ:ಕಅಅನಿ: ಲೆಕ್ಕ ಪತ್ರ:2020-21/215, ದಿನಾಂಕ:15-06-2020
7) ನಿಬಂಧಕರು, ಕರ್ನಾಟಕ ಉರ್ದು ಅಕಾಡೆಮಿ ಇವರ ಪತ್ರ ದಿನಾಂಕ:15.06.2020.
8) ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಹಜ್ ಸಮಿತಿ ಇವರ ಪತ್ರ ದಿನಾಂಕ:15.06.2020.
9) ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಇವರ ಪತ್ರ ದಿನಾಂಕ:15.06.2020.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ (ಹೊರಗುತ್ತಿಗೆ ಆಧಾರದ ಸಿಬ್ಬಂದಿಗೆ ವೇತನ, ಸಾಮನ್ಯ ವೆಚ್ಚಗಳು, ದೂರವಾಣಿ ವೆಚ್ಚಗಳು, ಕಟ್ಟಡ ವೆಚ್ಚಗಳು, ಸಾರಿಗೆ ವೆಚ್ಚಗಳು) ಅತೀ ಜರೂರು ಖರ್ಚುವೆಚ್ಚಗಳಿಗಾಗಿ ಏಪ್ರಿಲ್ ಮತ್ತು ಮೇ-2020 ತಿಂಗಳಿನಲ್ಲಿ ರೂ.227.66ಲಕ್ಷ ಅನುದಾನವನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಆರ್ಥಿಕ ಇಲಾಖೆಯು 2020-21ನೇ ಸಾಲಿನ ಆಯವ್ಯದಲ್ಲಿ ನಿಗಧಿಪಡಿಸಲಾದ ಪರಿಷ್ಕೃತ ಆಯವ್ಯಯದಲ್ಲಿ ನವೆಂಬರ್ ಮಾಹೆಯವರೆಗೆ ಪ್ರತಿ ತಿಂಗಳು 1/12 ರಂತೆ ಅನುದಾನ ಬಿಡುಗಡೆ ಮಾಡಲು ಹಾಗೂ ಸಂಬಂಧಪಟ್ಟ ಇಲಾಖೆಯವರು ವೆಚ್ಚ ಮಾಡಲು ಅನುಮತಿ ನೀಡಿ ಆದೇಶ ಹೊರಡಿಸಲಾಗಿದೆ

ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯಲ್ಲಿ 2019-20ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ಯೋಜನಾ ಕಾರ್ಯಕ್ರಮಗಳನ್ನು 2020-21ನೇ ಸಾಲಿನವರೆಗೆ ಮುಂದುವರೆಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) (5) (6) (7)(8) ಮತ್ತು (9)ರಲ್ಲಿ 2020-21ನೇ ಆರ್ಥಿಕ ವರ್ಷದಲ್ಲಿ ಒದಗಿಸಲಾಗಿರುವ ಆಯವ್ಯಯದಲ್ಲಿ ಆರ್ಥಿಕ ಇಲಾಖೆಯು ಖಜಾನೆ-2 ನಲ್ಲಿ ಬಿಡುಗಡೆ ಮಾಡಿರುವಂತೆ ಮೊದಲನೇ ತ್ರೈಮಾಸಿಕ ಕಂತಿನ ಶೇ. 25%ರಷ್ಟು (ಏಪ್ರಿಲ್, ಮೇ ಮತ್ತು ಜೂನ್-2020) ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ/ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ/ ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ/ ನಿಬಂಧಕರು, ಕರ್ನಾಟಕ ಉರ್ದು ಅಕಾಡೆಮಿ ಮತ್ತು ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಹಜ್ ಸಮಿತಿ ಇವರುಗಳು ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗಳನ್ನು ಹಾಗೂ 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಒದಗಿಸಲಾಗಿರುವ ಆಯವ್ಯಯದ ಪರಿಷ್ಕೃತ **(Budget Revised Estimate)**ಅನುದಾನದಲ್ಲಿ ಮೊದಲನೇ ತ್ರೈಮಾಸಿಕ ಕಂತು ಶೇ:25% ರಷ್ಟು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗಿದ್ದು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: MWD 164 MDS 2020.

### ಬೆಂಗಳೂರು ದಿನಾಂಕ:15.06.2020

ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯಲ್ಲಿ 2020-21ನೇ ಆರ್ಥಿಕ ಸಾಲಿನಲ್ಲಿ ಮುಂದುವರೆಸಲಾಗಿರುವ ಕೆಳಕಂಡ ಯೋಜನೆಗಳಿಗೆ ಪ್ರಸಕ್ತ ಸಾಲಿನಲ್ಲಿ ಮಂಜೂರಾಗಿರುವ ಆಯವ್ಯಯದಲ್ಲಿ ಮೊದಲನೇ ತ್ರೈಮಾಸಿಕ ಕಂತಾಗಿ (ಏಪ್ರಿಲ್, ಮೇ ಮತ್ತು ಜೂನ್-2020) ಆರ್ಥಿಕ ಇಲಾಖೆಯು ಈಗಾಗಲೇ **ಖಜಾನೆ-2 ರಲ್ಲಿ ಬಿಡುಗಡೆ ಮಾಡಿರುವ ಶೇ. 25%ರಷ್ಟು** ಅನುದಾನವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

..3.

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಯೋಜನೆ/ಲೆಕ್ಕಶೀರ್ಷಿಕೆ | 2020-21ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ನಿಗಧಿಪಡಿಸಲಾದ ಅನುದಾನ | ಈಗಾಗಲೇ ಬಿಡುಗಡೆ ಮಾಡಲಾದ ಅನುದಾನ | 2020-21ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಬಿಡುಗಡೆ ಮಾಡಲಾದ ಮೊದಲನೇ ಕಂತಿನ ಅನುದಾನ (ಶೇ.25%) (ಏಪ್ರಿಲ್, ಮೇ & ಜೂನ್-2020) |
|---|---|---|---|---|
| | *ಅಲ್ಪಸಂಖ್ಯಾತರ ಕಲ್ಯಾಣ ನಿದೇಶನಾಲಯ* | | | |
| 01 | ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಆಡಳಿತ (Directorate of Minorities (Administration) 2225-04-001-0-03 (002,003, 001, 014, 020, 021, 034, 041, 051, 052, 059, 071, 195.) | 1389.00 | 89.16 | 258.09 |
| 02 | ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ ( Christian Development Programes) 2225-04-102-0-04 (059) | 5500.00 | - | 1375.00 |
| 03 | ಅಲ್ಪಸಂಖ್ಯಾತರ ಕಲ್ಯಾಣ ಮದರಸಾದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಸಹಾಯಾನುದಾನ Providing Quality Education in Madrasas 2225-04-277-0-07 (103) | 1000.00 | - | 250.00 |
| 04 | ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು Teaching and Learning Aid to Govt. Minority Schools 2225-04-277-0-02 (051) | 500.00 | - | 125.00 |
| 05 | ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ Incentive for Minority Students 2225-04-277-0-03 (051) | 1000.00 | - | 250.00 |
| 06 | ಅಲ್ಪಸಂಖ್ಯಾತರ ವಸತಿ ಶಾಲೆಗಳು Minorities Residential Schools 2225-04-277-0-10 (002,003,011,014,020,034,041, 052,059,071 ) | 18903.00 | 1059.83 | 3665.92 |
| 07 | ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟಲ್‌ಗಳ ಪ್ರಾರಂಭ ಮತ್ತು ಮೌಲಾನ ಆಜಾದ್ ಶಾಲೆ/ಕಾಲೇಜುಗಳ ನಿರ್ವಹಣೆ. Hostels and Moulana Azad Schools 2225-04-277-0-09 (034,052,059,071) | 2249.00 | 25.00 | 537.25 |

.......4.